MAY 12, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ದಾದಿಯರ ಸಮರ್ಪಣೆ ಮತ್ತು ಕೊಡುಗೆಗಳನ್ನು ಗೌರವಿಸಲು, ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮ ದಿನವಾದ ಇಂದು, ಮೇ 12ನ್ನು, ಅಂತಾರಾಷ್ಟ್ರೀಯ ಶುಶ್ರೂಷಕರ ದಿನವಾಗಿ ಆಚರಿಸಲಾಗುತ್ತಿದೆ. ಅಂತಾರಾಷ್ಟ್ರೀಯ ದಾದಿಯರ ಮಂಡಳಿ I.C.N. 1974 ರಿಂದ, ದಾದಿಯರ ದಿನ ಆಚರಿಸುತ್ತಿದೆ. "ನಮ್ಮ ದಾದಿಯರು, ನಮ್ಮ ಭವಿ ್ಯ; ಸಬಲೀಕೃತ ದಾದಿಯರು, ಜೀವಗಳನ್ನು ಉಳಿಸುತ್ತಾರೆ" ಎಂಬ ಧ್ಯೇಯದೊಂದಿಗೆ, ನರ್ಸಿಂಗ್ ಕಾರ್ಯಪಡೆಯನ್ನು ಬೆಂಬಲಿಸಿ, ಸಬಲೀಕರಿಸಲು, ರಾಜ್ಯದ ವಿವಿಧೆಡೆ ವಿಶೇಷ ಕಾರ್ಯಕ್ರಮಗಳು ಆಯೋಜಿತವಾಗಿವೆ.

<><><>

'ಕಚ್ಚಾ ತೈಲ ಹಾಗೂ ಅಡುಗೆ ಅನಿಲದ, ವಾಸ್ತವ ಸಮಸ್ಯೆಯನ್ನು, ಜನತೆ ಬಲ್ಲರು; ವಿದೇಶಿ ವಿನಿಮಯದ ಕುರಿತು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕೊಟ್ಟ ಕರೆಗೆ, ದೇಶದ ಜನತೆ ಸ್ಪಂದಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಶಕ್ತಿ ಮೂಲಗಳ ನಿರ್ವಹಣೆಯಲ್ಲಿ, ದೇಶದಲ್ಲಿ ಸಾಕಷ್ಟು ಪರ್ಯಾಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ, ಕಚ್ಚಾತೈಲ ಹಾಗೂ ಎಲ್.ಪಿ.ಜಿ. ದರದಲ್ಲಿ ಏರಿಕೆಯಾದರೂ, ಕೇಂದ್ರ ಸರ್ಕಾರ ಅದನ್ನು ಭರಿಸಿ, ಜನರಿಗೆ ಅನುಕೂಲ ಮಾಡಿಕೊಟ್ಟಿದೆ, ಎಂದು ಸ್ಪಷ್ಟಪಡಿಸಿದರು.

<><><>

ವಿಕಸಿತ ಭಾರತ; ಉದ್ಯೋಗ ಖಾತ್ರಿ ಮತ್ತು ಜೀವನೋಪಾಯ ಮಿಷನ್, ಗ್ರಾಮೀಣ, 'ವಿ.ಬಿ. ಜಿ ರಾಮ್ ಜಿ' ಕಾಯ್ದೆ, ದೇಶಾದ್ಯಂತ ಜುಲೈ 1 ರಿಂದ, ಜಾರಿಗೆ ಬರಲಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ, ಅಧಿಸೂಚನೆ ಹೊರಡಿಸಿದೆ. ಮಹಾತ್ಮ ಗಾಂಧಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ – ಮನರೇಗಾ ಅಡಿಯಲ್ಲಿ, ಜೂನ್ ತಿಂಗಳ 30 ರ ವರೆಗೆ, ಎಲ್ಲ ಕಾಮಗಾರಿಗಳು, ತಡೆ ರಹಿತವಾಗಿ ಮುಂದುವರೆಯಲಿವೆ. ಈ ಬದಲಾವಣೆಯಿಂದ, ಕಾರ್ಮಿಕರಿಗೆ ಯಾವುದೇ ತೊಂದರೆಯಾಗದು ಎಂದು, ಕೇಂದ್ರ ಸರ್ಕಾರ, ಸ್ಪಷ್ಟ ಪಡಿಸಿದೆ.

<><><>

ಕೇಂದ್ರ ಚುನಾವಣಾ ಆಯೋಗ, ಮೂರನೇ ಹಂತದ ಮತದಾರ ಪಟ್ಟಿ ಪರಿಷ್ಕರಣೆಗೆ, ಸಿದ್ಧತೆ ನಡೆಸಿದೆ. ಕರ್ನಾಟಕ ಸೇರಿದಂತೆ, ಬಾಕಿ ಉಳಿದಿರುವ 22 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ, ಮತದಾರರು, ಪರಿಷ್ಕರಣೆಗೆ ಒಳಪಡಲಿದ್ದಾರೆ.

<><><>

ಗೃಹಲಕ್ಷ್ಮಿ ಯೋಜನೆ, ಮಾರ್ಚ್ ತಿಂಗಳ ಕಂತಿನ ಹಣ, ನಾಲ್ಕು ಅಥವಾ ಐದು ದಿನಗಳಲ್ಲಿ, ಏಪ್ರಿಲ್ ಕಂತಿನ ಹಣ, ಮುಂಬರುವ ಹತ್ತು ದಿನಗಳಲ್ಲಿ, ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆಯಾಗಲಿದೆ ಎಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ, ಲಕ್ಷ್ಮಿ ಹೆಬ್ಬಾಳಕರ, ಬೆಳಗಾವಿ ತಾಲೂಕು, ಬಾಕೂರಿನಲ್ಲಿ ಭರವಸೆ ನೀಡಿದ್ದಾರೆ.

<><><>

ಕೇಂದ್ರ ಲೋಕಸೇವಾ ಆಯೋಗದ, 2025ನೇ ಸಾಲಿನ, ಭಾರತೀಯ ಅರಣ್ಯ ಸೇವೆ –ಐ.ಎಫ್.ಎಸ್ ಪರೀಕ್ಷೆಯಲ್ಲಿ, ದೇಶಕ್ಕೆ ಪ್ರಥಮ ಸ್ಥಾನ ಪಡೆದ, ಬೆಳಗಾವಿ ಜಿಲ್ಲೆ, ಅಥಣಿ ತಾಲೂಕು, ಸವದಿ ಗ್ರಾಮದ, ಬಸವರಾಜ ಧರೆಪ್ಪ ಕೆಂಪವಾಡ, 14ನೇ ರ್‍ಯಾಂಕ್ ಗಳಿಸಿದ ದೀಕ್ಷಿತ ಎನ್. ಹಾಗೂ 63ನೇ ರ್‍ಯಾಂಕ್ ಪಡೆದ, ಕನಕಪುರದ ಅನುಷಾ ಶ್ರೀನಿವಾಸ ಅವರನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ, ಪ್ರಲ್ಹಾದ ಜೋಶಿ ಅಭಿನಂದಿಸಿದ್ದಾರೆ.

<><><>

ಐ.ಎಫ್.ಎಸ್. ಪ್ರಥಮ ರ್‍ಯಾಂಕ್ ಗಳಿಸಿರುವ, ಬಸವರಾಜ ಕೆಂಪವಾಡ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಬಸವರಾಜ ಕೆಂಪವಾಡ ಧ್ವನಿ 41 ಸೆಕೆಂದುಗಳು

<><><>

ವಿಜಯನಗರ ಜಿಲ್ಲೆ, ಹಂಪಿಯ ಪ್ರೇಕ್ಷಣೀಯ ಸ್ಥಳಗಳಲ್ಲಿ, ಮಹಿಳಾ ಸುರಕ್ಷತೆ ಮತ್ತು ಭದ್ರತೆಯ ಕುರಿತು, ಜನ ಜಾಗೃತಿ ಜರುಗಿತು. ವಿಶ್ವ ಪಾರಂಪರಿಕ ತಾಣ, ಹಂಪಿಯ ಶ್ರೀ ವಿರೂಪಾಕ್ಷ ದೇವಾಲಯ, ರಥ ಬೀದಿ ಹಾಗೂ ಬಸ್ ನಿಲ್ದಾಣದ ಸುತ್ತಮುತ್ತ, ಸಾರ್ವಜನಿಕರು ಮತ್ತು ಪ್ರವಾಸಿ ಮಹಿಳೆಯರಿಗೆ, ಸುರಕ್ಷತಾ ಕ್ರಮಗಳ ಬಗ್ಗೆ, ಅಕ್ಕ ಪಡೆ ಮತ್ತು ವಿಜಯ ಮಹಿಳಾ ಸುರಕ್ಷಾ ಪಡೆ ಜಾಗೃತಿ ಮೂಡಿಸಿತು. ‘ಮಿ ’ನ್ ಶಕ್ತಿ’, ’ಬೇಟಿ ಬಚಾವ್ರೋ, ಬೇಟಿ ಪಢಾವ್ರೋ’ ಮತ್ತು ‘ಸಖಿ ಒನ್ ಸ್ಟಾಪ್ ಸೆಂಟರ್’ಗಳ ಸೌಲಭ್ಯಗಳ ಬಗ್ಗೆ, ಸಖಿ ಕೇಂದ್ರದ ನಿರ್ವಾಹಕಿ ಬಿ.ಬಶೀರಾ, ಸಾರ್ವಜನಿಕರಿಗೆ ಮಾಹಿತಿ ನೀಡಿದರು.

<><><>

ಗದುಗಿನ ಲಡಾಯಿ ಪ್ರಕಾಶನ, ಧಾರವಾಡದ ಚಿತ್ತಾರ ಕಲಾ ಬಳಗ ಹಾಗೂ ಕವಿ ಪ್ರಕಾಶನ, ಕವಲಕ್ಕಿ ಸಂಯೋಜಿತ, ಮೇ ಸಾಹಿತ್ಯ ಮೇಳ ಬಳಗದಿಂದ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಆರ್.ಎನ್, ಶೆಟ್ಟಿ ಕಲ್ಯಾಣ ಮಂಟಪದಲ್ಲಿ, ಈ ತಿಂಗಳ 16 ಮತ್ತು 17 ರಂದು, 12ನೇ ಮೇ ಸಾಹಿತ್ಯ ಸಮ್ಮೇಳನ ನಡೆಯಲಿದೆ. ಲಡಾಯಿ ಪ್ರಕಾಶನದ ಬಸವರಾಜ ಸೂಳಿಬಾವಿ, ಹುಬ್ಬಳ್ಳಿಯಲ್ಲಿ ಮಾಹಿತಿ ನೀಡಿ, ಸಾಂವಿಧಾನಿಕ ಪ್ರಜಾಸತ್ತೆಯ ಮೇಲಿನ ದಾಳಿ; ಚಹರೆ ಮತ್ತು ಹೊರದಾರಿಗಳು ಎಂಬ ವಿಷಯ ಆಧರಿಸಿ, ಸಮ್ಮೇಳನ ನಡೆಯಲಿದೆ. ನರಗುಂದ–ನವಲಗುಂದ ರೈತ ಬಂಡಾಯ ವೇದಿಕೆಯಲ್ಲಿ, ಸಮ್ಮೇಳನ ನಡೆಯಲಿದೆ, ಎಂದರು.

<><><>

2026–27ರ, ಐ.ಸಿ.ಸಿ. ಎಲೈಟ್ ರೆಫ್ರಿಗಳ ಪಟ್ಟಿಯಲ್ಲಿ, ಭಾರತದ ಮಾಜಿ ಕ್ರಿಕೆಟಿಗ, ಕರ್ನಾಟಕದ ಹೆಸರಾಂತ ವೇಗದ ಬಾಲರ್, ಜಾವಗಲ್ ಶ್ರೀನಾಥ ಮುಂದುವರೆದಿದ್ದಾರೆ. ಅವರು ಈ ಪಟ್ಟಿಯಲ್ಲಿ ಸ್ಥಾನ ಪಡೆದಿರುವ, ಏಕೈಕ ಭಾರತೀಯ ಕ್ರಿಕೆಟಿಗ. ಕಳೆದ 2020 ರಿಂದಲೂ, ಜಾವಗಲ್ ಶ್ರೀನಾಥ ಐ.ಸಿ.ಸಿ. ಅಂಪೈರ್ ಆಗಿ ಕರ್ತವ್ಯನಿರ್ವಹಿಸುತ್ತಿದ್ದಾರೆ.

<><><>

ಬೆಂಗಳೂರಿನಲ್ಲಿ ಆಯೋಜಿತ, ಕರ್ನಾಟಕ ಓಪನ್ ಎ.ಟಿ.ಪಿ. ಚಾಲೇಂಜರ್, ಪುರುಷರ ಟೆನಿಸ್ ಪಂದ್ಯಾವಳಿಯಲ್ಲಿ, ಭಾರತದ ಆದಿತ್ಯ ವಿಶಾಲ ಅರ್ಹತಾ ಸುತ್ತಿನಲ್ಲಿ ಗೆದ್ದು, ಮುಖ್ಯ ಸುತ್ತು ಪ್ರವೇಶಿಸಿದ್ದಾರೆ. ಆದಿತ್ಯ, ಅರ್ಹತಾ ಸುತ್ತಿನ ಫೈನಲ್ ಪಂದ್ಯದಲ್ಲಿ, ಕಝಕಿಸ್ತಾನದ ಗ್ರಿಗೊರಿ ಲೊಮಾಕಿನ್ ವಿರುದ್ಧ, 6–3, 7–5ರ ನೇರ ಸೆಟ್‌ಗಳಲ್ಲಿ ಅವರು, ಗೆಲುವು ಸಾಧಿಸಿದರು.

<><><>

ಉತ್ತರಕನ್ನಡ, ಕೊಪ್ಪಳ, ಚಿಕ್ಕಮಗಳೂರು ಸೇರಿದಂತೆ, 14 ಜಿಲ್ಲೆಗಳಲ್ಲಿ ಕೆಲವೆಡೆ ಇಂದು, ಗುಡುಗು ಸಹಿತ, ಸಾಧಾರಣ ಮಳೆಯಾಗಲಿದೆ ಎಂದು, ರಾಜ್ಯ ಹವಾಮಾನ ಇಲಾಖೆ, ಮುನ್ಸೂಚನೆ ನೀಡಿದೆ. ಧಾರವಾಡ, ಗದಗ, ಹಾವೇರಿ, ದಕ್ಷಿಣಕನ್ನಡ ಹಾಗೂ ಉಡುಪಿ, ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು ಜಿಲ್ಲೆಗಳಲ್ಲಿ, ಮಳೆಯಾಗಬಹುದು ಎಂದು, ಹವಾಮಾನ ಇಲಾಖೆ ತಿಳಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.